ಸಾಕ್ಷಿ ಯನ್ನು ದಿಃ 20.11.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನಾನು ಪಿ.ಎಸ್.ಐ ಆಗಿ 2019 ರಲ್ಲಿ ನಿವೃತ್ತಿ ಹೊಂದಿದ್ದೇನೆ.
2. ನಿವೃತ್ತಿ ನಂತರ ನನ್ನ ಆದಾಯ ಪಿಂಚಣಿ ಸೇರಿ ವರ್ಷಕ್ಕೆ ಒಂದರಿಂದ ಒಂದೂವರೆ ಲಕ್ಷ.
3. ಪಿಂಚಣಿ ಬಿಟ್ಟರೆ ಬೇರೆ ಆದಾಯ ಇರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ.
4. ನನಗೆ ತಿಂಗಳಿಗೆ 42 ಸಾವಿರ ಪಿಂಚಣಿ ಬರುತ್ತದೆ. ನಾನು ಮೊದಲು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೆ. ನಾನು ವೃತ್ತಿಯಲ್ಲಿರುವಾಗ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇ ಈಗ ಇಲ್ಲ.
5. ನನಗೆ 2 ವರೆ ಎಕರೆ ಜಮೀನು ಇದೆ. ಅದು ತೋಟಗಾರಿಕೆ ಅಲ್ಲ ಡ್ರೈ ಲ್ಯಾಂಡ್.
6. ನನಗೆ 3 ಜನ ಮಕ್ಕಳು. ಒಬ್ಬ ಕಾಲೇಜಿನಲ್ಲಿ ಲೆಕ್ಚರರ್.
7. ನಮ್ಮ ಕುಟುಂಬದ ಖರ್ಚು ತಿಂಗಳಿಗೆ 40-50 ಸಾವಿರ ಆಗುತ್ತದೆ.
8. ನಾನು ಆರೋಪಿಗೆ ನಗದು ರೂಪದಲ್ಲಿ ಸಾಲ ನೀಡಿದ್ದೆ.
9. ನಿಮಗೆ ಬ್ಯಾಂಕಿಂಗ್ ವ್ಯವಹಾರದ ಬಗ್ಗೆ ಜ್ಞಾನ ಇದೆ ಎಂದರೆ ಸರಿ.
10. ಆರೋಪಿ ನನ್ನ ಬಳಿ ದಿಃ 07.12.2023 ರಲ್ಲಿ 8 ಲಕ್ಷ ಸಾಲ ಕೇಳಿದ್ದರು. ಆಗ ನಾನು ಈಗ ಹಣ ಇಲ್ಲ ಒಂದು ತಿಂಗಳು ಕಳೆದ ನಂತರ ನೋಡೋಣ ಎಂದು ಹೇಳಿದ್ದೆ.
11. ನಾನು ದಿಃ 07.01.2024 ರಲ್ಲಿ ಆರೋಪಿಗೆ ಹಣ ನೀಡಿದ್ದೆ. ದಿಃ 07.12.2023 ರಿಂದ ದಿಃ 07.01.2024 ರಲ್ಲಿ ನನಗೆ 8 ಲಕ್ಷ ಹಣ ಬಂದ ಬಗ್ಗೆ ದಾಖಲೆ ಇದೆಯಾ ಎಂದರೆ, ಇದೆ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ.
12. ಆರೋಪಿಗೆ ನೀವು ಚೆಕ್, ನೆಫ್ಟ್ ಅಥವಾ ಆರ್.ಟಿ.ಜಿ.ಎಸ್ ಮೂಲಕ ನೀಡಲು ತೊಂದರೆ ಇತ್ತಾ ಎಂದರೆ, ತೊಂದರೆ ಇರಲಿಲ್ಲ.
13. ಆರೋಪಿಗೆ ನೀವು ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.
14. ಆರೋಪಿ ನನ್ನ ಮನೆಗೆ ಬಂದು ಸಾಲ ಕೇಳಿದ್ದರು. ಆಗ ಬೇರೆ ಯಾರೂ ಇರಲಿಲ್ಲ.
15. ನನ್ನ ಮನೆಯಲ್ಲಿ ನಾನು, ನನ್ನ ಪತ್ನಿ, ಮಗ ಹಾಗೂ ಸೊಸೆ ವಾಸವಿದ್ದೇವೆ.
16. ಆರೋಪಿ ನನ್ನ ಮನೆಗೆ ಬಂದಾಗ ಬೆಳಿಗ್ಗೆ 11 ರಿಂದ 11-30 ಗಂಟೆ ಇರಬಹುದು.

17. ಆರೋಪಿ ನನಗೆ ಸಂಬಂಧಿಕ ಎಂದರೆ ಸರಿ.
18. ನೀವು ಅವರ ಮನೆಗೆ ಅವರು ನಿಮ್ಮ ಮನೆಗೆ ಬಂದು ಹೋಗುವುದು ವಾಡಿಕೆ ಇದೆ ಎಂದರೆ, ಒಂದೊಂದು ಬಾರಿ ಹೋಗುತ್ತೇವೆ ಎಂದು ನುಡಿಯುತ್ತಾರೆ.
19. ಆರೋಪಿಗೆ ನಮ್ಮ ಮನೆಯಲ್ಲಿ ಹಣ ನೀಡಿದ್ದೆ. ಆಗ ಬೇರೆ ಯಾರೂ ಇರಲಿಲ್ಲ.
20. 8 ಲಕ್ಷ ನನಗೆ ದೊಡ್ಡ ಮೊತ್ತ. ಅಷ್ಟು ಮೊತ್ತದ ಹಣವನ್ನು ನೀಡಬೇಕಾದರೆ ಸಾಕ್ಷಿಗಳ ಸಮಕ್ಷಮ ನೀಡಲು ಯೋಚನೆ ಮಾಡಿದ್ದೀರಾ ಎಂದರೆ, ಆತ ಚೆಕ್ಕು ಕೊಟ್ಟಿದ್ದರು ಎಂದು ನುಡಿಯುತ್ತಾರೆ.
21. ಚೆಕ್ಕನ್ನು ಮೊದಲೇ ಬರೆದುಕೊಂಡು ಬಂದಿದ್ದರು, ನನ್ನ ಮುಂದೆ ಸಹಿ ಮಾಡಿ ನೀಡಿದ್ದಾರೆ.
22. ನಿಮ್ಮ ಹಾಗೂ ಆರೋಪಿ ನಡುವೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ.
23. ಚೆಕ್ ಮೇಲಿರುವ ಬರವಣಿಗೆ ಹಾಗೂ ಸಹಿ ಅವರದಲ್ಲ ಎಂದರೆ ಸರಿಯಲ್ಲ.
24. ಹಣವನ್ನು ಆರೋಪಿಗೆ ನಾನೇ ಎಣಿಸಿ ನೀಡಿದ್ದೆ. 500 ಮುಖಬೆಲೆಯ 1600 ನೋಟುಗಳು ಹಾಗೂ 16 ಕಟ್ಟುಗಳು ಇದ್ದವು. ಸದರಿ ಹಣವನ್ನು ನಮ್ಮ ಮನೆಯಲ್ಲಿ ಎಮರ್ಜನ್ಸಿ ಬೇಕಾಗುತ್ತದೆ ಎಂದು ಸೇಫ್ ಲಾಕರ್ ನಲ್ಲಿ ಇಟ್ಟಿದ್ದೆ. ಸದರಿ ಲಾಕರ್ ನಲ್ಲಿ ನಾನು 8 ಲಕ್ಷ ಹಣವನ್ನು ದಿಃ 12.01.2021 ರಲ್ಲಿ ಇಟ್ಟಿದ್ದೆ.
25. ಆರೋಪಿ ಅಬ್ಬೂರು ಎಸ್.ಬಿ.ಐ ಬ್ಯಾಂಕ್ ನಲ್ಲಿ ಚಾಲಕನಾಗಿದ್ದಾರೆ.
26. ಹಣದ ಕಟ್ಟುಗಳು ಸಾಮಾನ್ಯವಾಗಿ ಬ್ಯಾಂಕಿನಿಂದ ಡ್ರಾ ಮಾಡಿದರೆ ಸಿಗುತ್ತವೆ ಎಂದರೆ ಸರಿ.
27. ದಿಃ 12.01.2021 ರಂದು ಡ್ರಾ ಮಾಡಿದ ಬಗ್ಗೆ ಪೋಸ್ಟ್ ಆಫೀಸ್ ದಾಖಲೆ ಇದೆ.
28. ಆರೋಪಿ ಮಾಸಿಕ ಎಷ್ಟು ಸಂಪಾದನೆ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.
29. ಯಾವುದೇ ವ್ಯಕ್ತಿ ಸಾಲ ಕೇಳಿದರೆ ಲಕ್ಷ ಲಕ್ಷ ಹಣ ನೀಡುವ ಅಭ್ಯಾಸ ಇದೆಯಾ ಎಂದರೆ, ನನ್ನ ತಮ್ಮ ಆದ ಕಾರಣ ನೀಡಿದ್ದೆ.
30. ಇತ್ತೀಚೆಗೆ ನೀವು ಮಂಜುನಾಥ ಎಂಬುವವರ ಮೇಲೆ ಇದೇ ನ್ಯಾಯಾಲಯದಲ್ಲಿ ಚೆಕ್ ಪ್ರಕರಣ ಹಾಕಿದ್ದೀರಾ ಎಂದರೆ ಸರಿ. ಅವರ ಮೇಲೆ 5 ಲಕ್ಷ 75 ಸಾವಿರಕ್ಕೆ ಹಾಕಿದ್ದೇನೆ. ಬೇರೆ ಯಾವುದೇ ಪ್ರಕರಣಗಳು ಇಲ್ಲ.
31. ನೀವು ನಿಮ್ಮ ಸಂಬಂಧಿಕರ ಮನೆಗೆ ಹೋದಾಗ ಅವರ ಚೆಕ್ ಗಳನ್ನು ತೆಗೆದುಕೊಂಡು

ದುರುಪಯೋಗಪಡಿಸಿಕೊಂಡು ಸುಳ್ಳು ದೂರು ನೀಡುವ ಚಾಳಿ ನಿಮಗೆ ಇದೆ ಎಂದರೆ ಸರಿಯಲ್ಲ.

32. ಆರೋಪಿ ಚೆಕ್ ನಂ.801451 ರಿಂದ 801470 ವರೆಗಿನ ಚೆಕ್ ಪುಸ್ತಕ ಮತ್ತು ಪಾಸ್ ಪುಸ್ತಕ ಕಳೆದು ಹೋಗಿದ್ದು ಖಾತೆ ಮುಕ್ತಾಯಗೊಳಿಸುವಂತೆ ಬ್ಯಾಂಕಿಗೆ 2020 ರಲ್ಲಿ ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

33. 2020 ರಲ್ಲಿ ಕಳೆದುಹೋದ ಚೆಕ್ಕನ್ನು ನೀವು ಪಡೆದು ದುರುಪಯೋಗಪಡಿಸಿಕೊಂಡು ಪ್ರಕರಣ ಹಾಕಿದ್ದೀರಾ ಎಂದರೆ ಸರಿಯಲ್ಲ.

34. ನನಗೆ ನಟರಾಜು ಎಂಬುವವರು ಪರಿಚಯ ಇಲ್ಲ. ಹರೀಶ ರವರು ಸ್ವಲ್ಪ ಪರಿಚಯ. ಲೋಬಾ ಎಂಬುವವರು ಗೊತ್ತು.

35. ಒಬ್ಬ ಕಾರ್ ಚಾಲಕನ ಆರ್ಥಿಕ ಸಾಮರ್ಥ್ಯದ ಬಗ್ಗೆ ತಿಳಿಯದ ಹಣ ನೀಡುವ ಬಗ್ಗೆ ಯೋಚನೆ ನೀಡಿದ್ದೀರಾ ಎಂದರೆ ಅವರು ನನ್ನ ಬಳಿ ಕಾಲಿಗೆ ಬಿದ್ದು ಮನೆ ಖರೀದಿ ಮಾಡಲು ಹಣ ಕೇಳಿದ್ದರು ಎಂದು ನುಡಿಯುತ್ತಾರೆ.

36. ಆರೋಪಿ 2023 ರಲ್ಲಿ ಮನೆ ಖರೀದಿ ಮಾಡಿದ್ದು ನಿಮ್ಮ ಬಳಿ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ಎಲ್ಲಿ ಮನೆ ಖರೀದಿಸುತ್ತಿದ್ದಾರೆ ಎಂದು ಕೇಳಿದ್ದೀರಾ ಎಂದರೆ, ವಿಚಾರಿಸಿದ್ದು ಅಬ್ಬೂರು ಎಸ್.ಬಿ.ಐ ಬ್ಯಾಂಕ್ ಬಳಿ ಖರೀದಿಸುವುದಾಗಿ ಹೇಳಿದ್ದರು.

37. ಆರೋಪಿ 2023 ರಲ್ಲಿ ಮನೆ ಖರೀದಿ ಮಾಡಿದ್ದು ಆತನಿಗೆ 8 ಲಕ್ಷದ ಅವಶ್ಯಕತೆ ಆಗ ಇರಲಿಲ್ಲ ಎಂದರೆ ಸರಿಯಲ್ಲ. ಮನೆಯನ್ನು 32 ಲಕ್ಷಕ್ಕೆ ಖರೀದಿಸುತ್ತಿರುವುದಾಗಿ ಹೇಳಿದ್ದರು. ಖರೀದಿ ಮಾಡಿದ ದಿನಾಂಕ ನನಗೆ ಗೊತ್ತಿಲ್ಲ.

38. ನನಗೆ ಬಡ್ಡಿ ವ್ಯವಹಾರ ಮಾಡುವ ಅಭ್ಯಾಸ ಇಲ್ಲ.

39. ಆರೋಪಿಯಿಂದ ಭದ್ರತೆಗೆ ಏನು ಪಡೆದಿದ್ದೀರಾ ಎಂದರೆ, ಚೆಕ್ಕನ್ನು ಹೊರತುಪಡಿಸಿ ಬೇರೆ ಏನು ಪಡೆದಿಲ್ಲ. ಅವರು ದಿಃ 07.02.2024 ಕ್ಕೆ ಹಾಜರುಪಡಿಸುವಂತೆ ಒಂದು ವಾರದ ಹಿಂದೆ ಹೇಳಿದ್ದರು. ಒಂದು ವಾರದ ಹಿಂದೆ ಎಂದರೆ ದಿಃ01.02.2024 ಎಂದರೆ ಹೌದು. ಸದರಿ ವಿಚಾರವನ್ನು ನೋಟೀಸಿನಲ್ಲಿ ಮತ್ತು ದೂರಿನಲ್ಲಿ ತಿಳಿದ್ದೇನೆ. ಆ ರೀತಿ ನೋಟೀಸಿನಲ್ಲಿ ಅಥವಾ ದೂರಿನಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ.

40. ಬ್ಯಾಂಕಿನಿಂದ ದಿಃ 15.02.2024 ರಂದು ಹಿಂಬರಹ ಬಂದಿದೆ. ಖಾತೆ ಕ್ಲೋಸ್ ಆಗಿದೆ ಎಂದು ಹಿಂಬರಹ ಬಂದಿದೆ. ನಂತರ ನಾನು ಆರೋಪಿಯನ್ನು ಭೇಟಿ ಮಾಡಿ ಕೇಳಿಲ್ಲ.

ಆರೋಪಿಯಿಂದ ಕೇಳಿದರೆ ನೀವು ಚೆಕ್ ದುರುಪಯೋಗಪಡಿಸಿಕೊಂಡ ವಿಚಾರ ಗೊತ್ತಾಗುತ್ತದೆ ಎಂದು ಕೇಳಿಲ್ಲ ಎಂದರೆ ಸರಿಯಲ್ಲ.

41. ನಿಮಗೆ ಆರೋಪಿಗೆ 8 ಲಕ್ಷ ಹಣ ನೀಡುವ ಸಬಲತೆ ಇಲ್ಲ ಹಾಗೂ ಆರೋಪಿಗೆ ನಿಮ್ಮಿಂದ 8 ಲಕ್ಷ ಹಣ ಪಡೆಯುವ ದರ್ದು ಸಹ ಇಲ್ಲ ಎಂದರೆ ಸರಿಯಲ್ಲ.

42. ನನ್ನ ಹೆಸರಿನಲ್ಲಿ ಯಾವುದೇ ಪಹಣಿ ಇಲ್ಲ.

43. ಯಾವುದೇ ಒಬ್ಬ ವ್ಯಕ್ತಿಗೆ 20 ಸಾವಿರಕ್ಕಿಂತ ಹೆಚ್ಚಿನ ವ್ಯವಹಾರ ನಗದಾಗಿ ಮಾಡಬಾರದು ಎಂದು ಕಾನೂನು ಇದೆ ಎಂದರೆ, ಇದೆ. ಆ ರೀತಿ ನಿಮಗೆ ಮಾಹಿತಿ ಇರುವುದರಿಂದ ನೀವು 8 ಲಕ್ಷದ ವ್ಯವಹಾರವನ್ನು ಮಾಡಬೇಕಾದರೆ ಬ್ಯಾಂಕ್ ಮೂಲಕ ಮಾಡುತ್ತಿದ್ದೀರಿ, ಆರೋಪಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ.

44. ಆರೋಪಿ ಮನೆ ಖರೀಧಿಸಿ ಉತ್ತಮ ಜೀವನ ಕಟ್ಟಿಕ್ಕೊಳ್ಳುವ ಸಮಯಲ್ಲಿ ಅವನಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ದೂರು ಹಾಕಿದ್ದೀರಾ ಎಂದರೆ ಸರಿಯಲ್ಲ.

45. ನೀವು ಆರೋಪಿಗೆ ಯಾವುದೇ ಹಣ ನೀಡಿಲ್ಲ, ಆರೋಪಿ ಚೆಕ್ ನೀಡಿಲ್ಲ ನಿಮಗೆ ಹಣ ನೀಡುವ ಹೊಣೆಗಾರಿಗೆ ಆರೋಪಿಗೆ ಇಲ್ಲ ಎಂದರೆ ಸರಿಯಲ್ಲ.

46. ಚೆಕ್ ಪ್ರಕರಣ ಹೊರತುಪಡಿಸಿ ಬೇರೆ ಪ್ರಕರಣಗಳು ಇಲ್ಲ. ಒಂದು ಸಿವಿಲ್ ದಾವೆ ಇದೆ.

47. ನಿಮಗೆ ಪಿಂಚಣಿ ಹೊರತುಪಡಿಸಿ ಬೇರೆ ಆದಾಯ ಇಲ್ಲದೇ ಇರುವುದರಿಂದ ನಿಮಗೆ ಮಾಸಿಕ 40 ಸಾವಿರ ಖರ್ಚು ಇರುವುದರಿಂದ ನಿಮಗೆ ಹಣ ನೀಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ